ಸಾಕ್ಷಿಯನ್ನು ದಿನಾಂಕಃ 11/07/2019 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ. ಹೆಚ್.ಪಿ.ಎಸ್. ವಕೀಲರಿಂದಃ-

ನನ್ನ ಮತ್ತು ಮನೆ ಬೇರೆ ಬೇರೆ ಕಡೆ ಇದೆ ಎಂದರೆ ಸರಿಯಲ್ಲ, ಸಾಕ್ಷಿ ಒಂದೇ ಕಡೆ ಇದೆ ಎಂದು ನುಡಿಯುತ್ತಾರೆ. ಎಷ್ಟು ದೂರದ ಅಂತರವಿದೆ ಎಂದರೆ ನಾವು ಒಟ್ಟು ಕುಟುಂಬದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಹೊಸಮಾಳ ಅಲ್ಲಿ ಸರ್ಕಾರ ಕೊಟ್ಟಿರುವ ಒಂದು ಸೈಟಿನಲ್ಲಿ ನನ್ನ ತಂದೆ ಮನೆ ಕಟ್ಟಿರುತ್ತಾರೆ. ಆ ಮನೆಯನ್ನು ನನ್ನ ತಾಯಿಯ ತಂದೆ ಕಟ್ಟಿಕೊಟ್ಟಿರುತ್ತಾರೆ. ನನ್ನ ತಾಯಿ 3 ನೇ ವಾದಿಯವರಿಗೆ ಸರ್ಕಾರದಿಂದ ಒಂದು ಸೈಟನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಸೈಟಿನಲ್ಲಿ ನನ್ನ ತಾಯಿ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಕೊಟ್ಟಂತಹ ಸೈಟಿನಲ್ಲಿ ಸುಮಾರು 30 ವರ್ಷದ ಹಿಂದೆ ಮನೆಯನ್ನು ಕಟ್ಟಿರುತ್ತಾರೆ. ಈ ಮನೆಯಿಂದ ಊರಿಗೆ 150 ರಿಂದ 200 ಅಡಿ ಅಂತರವಿರುತ್ತದೆ. ಈ

ಮನೆಯಿಂದ ಊಗಿಗೆ ಅರ್ಧ ಕಿಲೋಮೀಟರ್ ಅಂತರವಿದೆ ಎಂದರೆ ಸರಿಯಲ್ಲ. ಇದೇ ಮನೆಯಲ್ಲಿ ನಾನು ನನ್ನ ತಂದೆ , ತಾಯಿ ವಾಸವಾಗಿದ್ದೇವೆ ಎಂದರೆ ಸರಿ.

ಪ್ರತಿವಾದಿಯು ಊರಿನಲ್ಲಿರುವ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಪ್ರತಿವಾದಿಗಳಿಗೆ ಸರ್ಕಾರದಿಂದ ಯಾವುದೇ ಸೈಟುಗಳು ಹಂಚಿಕೆ ಆಗಿರುವುದಿಲ್ಲ , ದಾವಾ ಆಸ್ತಿಯು ಪತ್ರಾರ್ಜಿತ ಆಸ್ತಿ ಎಂದು ಸಾಕ್ಷಿ ಮುಂದುವರೆದು ನುಡಿಯುತ್ತಾರೆ. ಪ್ರತಿವಾದಿ 3 ರಿಂದ 7 ರವರು ಅವರವರು ಬೇರೆ ಬೇರೆ ಯಾಗಿ 10 ವರ್ಷದಿಂದ ವಾಸವಾಗಿದ್ದಾರೆ ಎಂದರೆ ಸರಿ.

ನನ್ನ ತಂದೆ 1993 ರಲ್ಲಿ ನಿಧನರಾಗಿರುತ್ತಾರೆ. ನನ್ನ ತಂದೆ ಮದುವೆಯಾದ ನಂತರ ನನ್ನ ತಾಯಿಯ ಊರು ಅರಸಿನಕೆರೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಜಮೀನುಗಳನ್ನು ನಾನು ನೋಡಿದ್ದೇನೆ. ದಾವಾ ಎ ಶೆಢ್ಯೂಲ್ ಆಸ್ತಿಯು ದರ್ಖಾಸ್ತು ಜಮೀನು ಎಂದರೆ ಸರಿಯಲ್ಲ, ಅದು ನನ್ನ ತಾತ ತೆಗೆದುಕೊಂಡ ಆಸ್ತಿ ಎಂದು ಸಾಕ್ಷಿ ಮುಂದುವರೆದು ನುಡಿಯುತ್ತಾರೆ. ದಾವಾ ಎ ಶೆಡ್ಯೂಲ್ ಆಸ್ತಿ ಸರ್ಕಾರದ ಆಸ್ತಿಯೆಂದರೆ ಸರಿಯಲ್ಲ. ಪ್ರತಿವಾದಿ 4 ರಿಂದ 7 ರವರ ಹೆಸರಿಗೆ ದಾವಾ ಎ ಆಸ್ತಿಯು ಖಾತೆ ಇದ್ದರು ಸಹ ಆ ಆಸ್ತಿಯು ಎಲ್ಲಿದೆ ಎಂದು ಯಾರಿಗೂ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಜಮೀನುಗಳು ಪ್ರತಿವಾದಿ 4 ರಿಂದ 7 ರವರ ಹೆಸರಿಗೆ 1998-99 ರಲ್ಲಿಯೇ

ಖಾತೆಯಾಗಿದೆ ಎಂಬ ವಿಷಯ ಮೊದಲೇ ಗೊತ್ತಿತ್ತು ಎಂದರೆ  ಸರಿಯಲ್ಲ. ಈ ದಾವಾ ಆಸ್ತಿಗೂ ನನಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆ ದಾವಾ ಆಸ್ತಿಗಳು ಪ್ರತಿವಾದಿ 3 ರಿಂದ 7 ರವರ ಕುಟುಂಬದ ಆಸ್ತಿ ಯಾಗಿರುತ್ತದೆ. ಇವರಿಗೂ ಮತ್ತು ನನ್ನ ಕುಟುಂಬಕ್ಕೆ ಯಾವುದೇ ಸಂಬಧವಿಲ್ಲ ಎಂದರೆ ಸರಿಯಲ್ಲ.

1973 ರಲ್ಲಿ ಜವನಮ್ಮ ಮತ್ತು ನನ್ನ ತಾತನ 2 ನೇ ಹೆಂಡತಿ ಸಾಕಮ್ಮನ ಮಕ್ಕಳ ನಡುವೆ ಮೊದಲೇ ಆಸ್ತಿಗಳ ಭಾಗ ವಾಗಿದೆ ಎಂದರೆ ಸರಿಯಲ್ಲ. ಅದು ಬಾಯಿ ಮಾತಿನ ವಿಭಾಗ ಎಂದರೆ ಸರಿಯಲ್ಲ. ಆ ರೀತಿ ಆದ ವಿಭಾಗವನ್ನು ನಿಪಿ-10 ರಲ್ಲಿ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಅದರಂತೆ ಪ್ರತಿವಾದಿಗಳು ಪ್ರತ್ಯೇಕವಾಗಿ ಬೇರೆಯಾಗಿದ್ದು ಬೇರೆ ಬೇರೆಯಾಗಿ ಸಂಸಾರ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾತನ ಮೊದಲನೇ ಹೆಂಡತಿ ಜವನಮ್ಮ ನವರಿಗೆ ಒಬ್ಬನೇ ಮಗ ಮಾದಣ್ಣ ಎಂದರೆ ಸರಿಯಲ್ಲ. ಮಾದಣ್ಣ ಮತ್ತು ನನ್ನ ತಾತನ 2 ನೇ ಹೆಂಡತಿ ಸಾಕಮ್ಮನ ಮಕ್ಕಳು ಮತ್ತು ಪ್ರತಿವಾದಿ 3 ರಿಂದ 7 ರ ನಡುವೆ ವಿಭಾಗವಾಗಿತ್ತು ಎಂದರೆ ಸರಿಯಲ್ಲ. ನನ್ನ ತಾತನ ಇಬ್ಬರು  ಹೆಂಡತಿ ಯರ ಮಕ್ಕಳಿಗೆ ತಾಯಿ ಪಾಲು ಎಂದು ಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ತಾತನ ಮೊದಲನೇ ಹೆಂಡತಿ ಮಗ ಮಾದಣ್ಣ ಮತ್ತು ಅವರ ಮಕ್ಕಳು ದಾವಾ ಡಿ ಶೆಡ್ಯೂಲ್ ಆಸ್ತಿಯಲ್ಲಿ ಈಗಲೂ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಕುಟುಂಬದಲ್ಲೂ ಸಹ ಒಟ್ಟು ಕುಟುಂಬದ ಆಸ್ತಿ ಅಸ್ತಿತ್ವ ಇಲ್ಲ ಎಂದರೆ ಸರಿಯಲ್ಲ.  ದಾವಾ ಆಸ್ತಿಗಳನ್ನು ಹೊಡೆದುಕೊಳ್ಳಲು ಸುಳ್ಳು ಸಾಕ್ಷ್ಯ ಹೇಳುತತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆಯ ಊರು ಅರಸಿನಕೆರೆ ಈಗ ಅಹಲ್ಯ ಗ್ರಾಮದಲ್ಲಿ ವಾಸವಾಗಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

**1** ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,
ನಂಜನಗೂಡು